## ಬಿಲ್ಲುಗಾರರ ಗುರಿ

ಭಾರತದ ಪದಕ ಲಭಿಸುವ ಭರವಸೆ ಇರುವ ಇನ್ನೊಂದು ಕ್ರೀಡೆಯೆಂದರ್ ಆರ್ಚರಿ. ಅದರಲ್ಲೂ ಮಹಿಳಾ ಸ್ಪರ್ಧೆಗಳ ಮೇಲೆಯೇ ನಿರೀಕ್ಷೆಯ ಭಾರ ಇದೆ. 2015ರಲ್ಲಿ ಕೊಪನ್‌ಹೆಗನ್‌ನಲ್ಲಿ ವಿಶ್ವ ಚಾಂಪಿಯನ್ ಆಗಿದ್ದ ದೀಪಿಕಾಕುಮಾರಿ ನಾಯಕತ್ವದ ತಂಡವು ಸದ್ಯ ವಿಶ್ವದ ಅಗ್ರಗಣ್ಯ ಆರ್ಚರಿ ತಂಡಗಳಲ್ಲಿ ಒಂದು. ಬೊಂಬಿಯಾಲ ದೇವಿ, ಲಕ್ಷ್ಮೀರಾಣಿ ಮಜಿ ಅವರೂ ತಂಡದಲ್ಲಿದ್ದಾರೆ. ವೈಯಕ್ತಿಕ ವಿಭಾಗಗಳಲ್ಲಿಯೂ ಇವರ ಹಿಂದಿನ ಸಾಧನೆಗಳೇ ಇವರಿಗೆ ರಿಯೊದಲ್ಲಿ ಆತ್ಮವಿಶ್ವಾಸ ಗಳಿಸಲು ಸಹಕಾರಿಯಾಗಲಿವೆ.

ಪುರುಷರ ವಿಭಾಗದಲ್ಲಿ ಏಕೈಕ ಸ್ಪರ್ಧಿ ಅತನು ದಾಸ್ ಸ್ವಲ್ಪ ಹೆಚ್ಚು ಶ್ರಮಪಟ್ಟರೆ ಪದಕಕ್ಕೆ ಕೊರಳೊಡ್ಡಬಲ್ಲ ಸಮರ್ಥ. ಟ್ರಯಲ್ಸ್ ವೇಳೆ 24 ವರ್ಷದ ಅತನು ಅವರು ಒಲಿಂಪಿಯನ್‌ಗಳಾದ ಜಯಂತ್ ತಾಲೂಕದಾರ್ ಮತ್ತು ಮಂಗಲ್ ಸಿಂಗ್ ಚಾಂಪಿಯ ಅವರನ್ನು ಹಿಂದಿಕ್ಕಿದ್ದರು. ವಿಶ್ವಕಪ್ ಸ್ಟೇಜ್–3ರಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಅತನು ಅವರು ಟ್ರಯಲ್ಸ್‌ನಲ್ಲಿ 653 ಪಾಯಿಂಟ್ಸ್ ಕಲೆ ಹಾಕಿದ್ದರು. ಜತೆಗೆ 1.5 ಪಾಯಿಂಟ್ಸ್ ಬೋನಸ್ ರೂಪದಲ್ಲಿ ಅವರಿಗೆ ಲಭಿಸಿತ್ತು.




ಬೆಳ್ಳಿ ಪದಕ ಗೆದ್ದಿತ್ತು. 34 ವರ್ಷಗಳ ನಂತರ ಈ ಸಾಧನೆ ಮೂಡಿಬಂದಿತ್ತು.

ಬಲಿಷ್ಠ ತಂಡ ಆಸ್ಟ್ರೇಲಿಯಾ ಎದುರಿನ ಫೈನಲ್‌ನಲ್ಲಿ ವಿವಾದಾಸ್ಪದ ಪೆನಾಲ್ಟಿ ಶೂಟೌಟ್‌ನಲ್ಲಿ ಭಾರತ ಸೋತಿದ್ದರೂ. ಅಭಿಮಾನಿಗಳ ಮನ ಗೆದ್ದಿತ್ತು. ಅದೇ ತಂಡ ರಿಯೊದಲ್ಲಿ ಕಣಕ್ಕೆ ಇಳಿಯಲಿದೆ. ಕರ್ನಾಟಕದ ಎಸ್.ವಿ. ಸುನಿಲ್ ಉಪನಾಯಕರಾಗಿದ್ದಾರೆ. ಕೊಡಗಿನ ವಿ.ಆರ್. ರಘುನಾಥ್, ಎಸ್.ಕೆ. ಉತ್ತಪ್ಪ, ನಿಕ್ಕಿನ್ ತಿಮ್ಮಯ್ಯ, ಯುವ ಆಟಗಾರ ಹರ್ಮನ್‌ಪ್ರೀತ್ ಸಿಂಗ್, ಯುವರಾಜ್ ವಾಲ್ಮೀಕಿ, ಸರ್ದಾರ್ ಸಿಂಗ್ (ಲೈಂಗಿಕ ಹಗರಣದ ವಿವಾದದಿಂದಾಗಿ ಸರದಾರ್ ಸಿಂಗ್ ನಾಯಕತ್ವದ ಪಟ್ಟ ಕಳೆದುಕೊಂಡಿದ್ದರು) ತಂಡದಲ್ಲಿರುವ ಪ್ರಮುಖ ಆಟಗಾರರು.

2014ರ ಇಂಚೆನ್ ಏಷ್ಯನ್ ಕ್ರೀಡಾಕೂಟದ ಹಾಕಿಯಲ್ಲಿ ಚಿನ್ನ ಗೆದ್ದು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿತ್ತು. ಕಳೆದ ಎರಡು ವರ್ಷಗಳ ಅವಧಿಯಲ್ಲಿ ತಂಡವು ಆಡಿದ ಟೂರ್ನಿಗಳೆಲ್ಲವೂ ರಿಯೊ ಕದನದ ಪೂರ್ವಭಾವಿ ತಾಲೀಮುಗಳಾಗಿದ್ದವು. ಸೋಲುಗಳು ಪಾಠಗಳಾದರೆ, ಗೆಲುವುಗಳು ಆತ್ಮಬಲ ವೃದ್ಧಿಸಿದ್ದವು. ಅದೆಲ್ಲದರ ಫಲವಾಗಿ ತಂಡವು ಎಫ್‌ಐಎಚ್ ಶ್ರೇಷ್ಠಾಂಕ ಪಟ್ಟಿಯಲ್ಲಿ 12 ರಿಂದ 5ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

ಒಲಿಂಪಿಕ್ಸ್‌ನಲ್ಲಿ ತನ್ನ ಗುಂಪಿನಲ್ಲಿರುವ ಐರ್ಲೆಂಡ್, ಜರ್ಮನಿ, ಕೆನಡಾ, ಅರ್ಜೆಂಟಿನಾ, ನೆದರ್ಲೆಂಡ್ ತಂಡಗಳನ್ನು ಎದುರಿಸಲಿದೆ. ನಾಕೌಟ್ ಹಂತ ತಲುಪುವ ಭರವಸೆ ತಂಡದ ಆಟಗಾರರಲ್ಲಿದೆ.

### ಕುಸ್ತಿಯಂಗಳದ ನವತಾರೆ ಯಾರು?

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಪದಕವಿಜೇತ ನರಸಿಂಗ್ ಪಂಚಮ್ ಯಾದವ್ ಅವರ ಮೇಲೆ ಈಗ ಭಾರತದ ಕುಸ್ತಿಪ್ರೇಮಿಗಳ ದೃಷ್ಟಿ ನೆಟ್ಟಿದೆ. ಕಳೆದ ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದಿದ್ದ ಸುಶೀಲ್ ಕುಮಾರ್ (ಬೀಜಿಂಗ್‌ನಲ್ಲಿ ಕಂಚು, ಲಂಡನ್‌ನಲ್ಲಿ ಬೆಳ್ಳಿ) ಜಾಗದಲ್ಲಿ ನರಸಿಂಗ್ ಕಣಕ್ಕೆ ಇಳಿಯಲಿದ್ದಾರೆ.

ಸುಶೀಲ್ ಈ ಮೊದಲು 66 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. 2013ರಲ್ಲಿ ಫಿಲಾ ಕುಸ್ತಿ ನಿಯಮಗಳು ಬದಲಾದ ನಂತರ ಅವರು 74 ಕೆಜಿ ವಿಭಾಗದಲ್ಲಿ ಆಡುತ್ತಿದ್ದರು. ಗ್ಲಾಸ್ಗೋದಲ್ಲಿ ನಡೆದಿದ್ದ (2014) ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಇದೇ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ್ದರು. ಆದರೆ, ಹೋದ ವರ್ಷ ಗಾಯಗೊಂಡಿದ್ದ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿರಲಿಲ್ಲ.

ಆದರೆ ಮೊದಲಿನಿಂದಲೂ 74 ಕೆಜಿ ವಿಭಾಗದ ಸ್ಪರ್ಧಿಯಾಗಿದ್ದ ನರಸಿಂಗ್ ಯಾದವ್ ಅವರು ಲಾಸ್ ವೆಗಾಸ್‌ಗೆ ತೆರಳಿದ್ದರು. ಅಲ್ಲಿ ಕಂಚು ಗೆದ್ದಿದ್ದ ಅವರು ರಿಯೊ ರಹದಾರಿಯನ್ನೂ ಗಿಟ್ಟಿಸಿದರು. ಈ ವಿಭಾಗದಲ್ಲಿ ಒಬ್ಬರಿಗೆ ಮಾತ್ರ ಅವಕಾಶ ಇದ್ದ ಕಾರಣ ಸುಶೀಲ್‌ಗೆ ಅವಕಾಶ ಕೈತಪ್ಪಿತು.

ಆಗ ಅವರು ಭಾರತ ಕುಸ್ತಿ ಫೆಡರೇಷನ್ ಟ್ರಯಲ್ಸ್

